# ಪ್ರಥಮ ದರ್ಜೆ ನ್ಯಾಯಿಕಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು

## ಸಿಸಿ ಸಂಖ್ಯೆ:549/2021

| | |
|---|---|
| ಫ್ರಾಸಾ | 03 |
| ಚಾಸಾ | 03 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **30-11-2022**

| | | |
|---|---|---|
| ಸಾಕ್ಷಿಯ ಹೆಸರು | : | ಸುಜಾತ |
| ಗಂಡನ ಹೆಸರು | : | ಜಗನ್ನಾಥರೆಡ್ಡಿ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ನಾಗೇನಹಳ್ಳಿ |

**ಮುಖ್ಯ ವಿಚಾರಣೆ : ಎಪಿಪಿರವರಿಂದಃ**

1 ನೇ ಆರೋಪಿ ನನ್ನ ಅಳಿಯ. 2 ಮತ್ತು 3 ನೇ ಆರೋಪಿತರು ನನ್ನ ಬೀಗರು. ಫ್ರಾಸಾ-1 ನನ್ನ ಮಗಳು. ಫ್ರಾಸಾ-2 ನನ್ನ ಗಂಡ. ನನ್ನ ಮಗಳನ್ನು 1 ನೇ ಆರೋಪಿಗೆ ಕೊಟ್ಟು ವಿವಾಹ ಮಾಡಿದ್ದು, ಮದುವೆಯು ಧರ್ಮಸ್ಥಳದಲ್ಲಿ ಗುರು-ಹಿರಿಯರ ಸಮಕ್ಷಮ ನಡೆದಿತ್ತು. ಮದುವೆಯಾದ ನಂತರ ಒಂದು ವರ್ಷಗಳ ಕಾಲ ನನ್ನ ಮಗಳು ನನ್ನ ಮನೆಯಲ್ಲಿಯೇ ಇದ್ದರು. ಆ ಒಂದು ವರ್ಷದಲ್ಲಿ ನನ್ನ ಅಳಿಯ ಮನೆಗೆ ಬಂದು ಹೋಗುತ್ತಿದ್ದರು. ಒಂದು ವರ್ಷದ ನಂತರ ನನ್ನ ಮಗಳನ್ನು ನನ್ನ ಅಳಿಯ ದೊಡ್ಡಬಳ್ಳಾಪುರಕ್ಕೆ ಕರೆದುಕೊಂಡು ಹೋಗಿದ್ದರು. ಒಂದು ವರ್ಷ ದೊಡ್ಡಬಳ್ಳಾಪುರದಲ್ಲಿ ವಾಸವಾಗಿದ್ದರು. ಒಂದು ವರ್ಷದ ನಂತರ ನನ್ನ ಮಗಳು ಹೆಣ್ಣು

ಮಗುವಿಗೆ ಜನ್ಮ ನೀಡಿದ್ದು, 9 ತಿಂಗಳ ಕಾಲ ನಮ್ಮ ಮನೆಯಲ್ಲೇ ನನ್ನ ಮಗಳಿಗೆ ಆರೈಕೆ ಮಾಡಿದ್ದು, ನಂತರ ನನ್ನ ಮಗಳು ಮತ್ತು ಮಗುವನ್ನು ಆರೋಪಿಯು ದೊಡ್ಡಬಳ್ಳಾಪುರಕ್ಕೆ ಕರೆದುಕೊಂಡು ಹೋಗಿದ್ದರು. ಅಲ್ಲಿ ಸುಮಾರು 6 ತಿಂಗಳ ಕಾಲ ಅನ್ಯೋನ್ಯವಾಗಿದ್ದರು. ನಂತರ ಆಗಾಗ ಜಗಳ ಮಾಡಿಕೊಂಡು ಮನೆಗೆ ಬರುತ್ತಿದ್ದರು. ಆಗ ಇಬ್ಬರಿಗೂ ಸಮಾಧಾನ ಹೇಳಿ ಕಳುಹಿಸುತ್ತಿದ್ದೆವು. ನಂತರ ನನ್ನ ಅಳಿಯ ಹಣ ಬೇಕೆಂದು ಕೇಳಿ ಐದು ಲಕ್ಷ ಚೀಟಿ ವ್ಯವಹಾರಕ್ಕೆ ಬೇಕೆಂದು ಕೇಳಿದ್ದು, ನಂತರ ಸದರಿ ಹಣವನ್ನು 1 ನೇ ಆರೋಪಿಗೆ ನೀಡಿದ್ದೆವು. ನಾವು ಹಣ ನೀಡಿದ ವಿಚಾರವು ನನ್ನ ಮಗಳಿಗೆ ತಿಳಿದಿರಲಿಲ್ಲ. ಆರೋಪಿಯು ಸಹ ಹಣ ಪಡೆದ ವಿಚಾರವನ್ನು ಮಗಳಿಗೆ ಹೇಳದಂತೆ ತಿಳಿಸಿದ್ದರು. ನಂತರ ಹಣ ಪಡೆದ ವಿಚಾರವನ್ನು ತಿಳಿದು ನನ್ನ ಮಗಳು ಗಂಡನ ಮೇಲೆ ಜಗಳಕ್ಕೆ ಹೋಗಿದ್ದರು. ಪುನಃ ಕಿತ್ತಾಡಿಕೊಂಡು ನನ್ನ ಮಗಳು ನನ್ನ ಮನೆಗೆ ವಾಪಸ್ಸು ಬಂದಳು. ಆಗಲೂ ಸಹ ನ್ಯಾಯ ಪಂಚಾಯಿತಿ ಮಾಡಿ ಗಂಡನ ಮನೆಗೆ ಹೋಗಿ ಬಿಟ್ಟುಬಂದೆವು. ಪುನಃ ಹಣಬೇಕೆಂದು ನನ್ನ ಮಗಳಿಗೆ 1 ನೇ ಆರೋಪಿಯು ಹೊಡೆದು ತವರು ಮನೆಗೆ ಕಳುಹಿಸಿದ್ದರು. ಆಗಲೂ ಸಹ ಪಂಚಾಯಿತಿ ಮಾಡಿ ನನ್ನ ಮಗಳನ್ನು ಗಂಡನ ಮನೆಗೆ ಬಿಟ್ಟು ಬಂದೆವು. ನಂತರ 3 ತಿಂಗಳುಗಳ ಕಾಲ ಅನ್ಯೋನ್ಯವಾಗಿದ್ದರು. ನಂತರದ ದಿನಗಳಲ್ಲಿ ಹೆಂಡತಿಯು ಕೆಲಸಕ್ಕೆ ಹೋಗಿಲ್ಲವೆಂದು ಪುನಃ ಹೆಂಡತಿಯ ಮೇಲೆ ಜಗಳ ಮಾಡಿದ್ದರು.

ನಂತರ ನನ್ನ ಮಗಳಿಗೆ ಆರೋಪಿತರು ವಿಷ ಕುಡಿಸಿದ್ದರಂತೆ. ನಂತರ ನನ್ನ ಅಳಿಯ ನನ್ನ ಮಗಳು ವಿಷ ಕುಡಿದ ವಿಚಾರವನ್ನು ಫೋನಿನಲ್ಲಿ ತಿಳಿಸಿದರು. ಗೌರಿಬಿದನೂರಿನ ಮಾನಸ ಆಸ್ಪತ್ರೆಗೆ ಹೋಗಿ ನನ್ನ ಮಗಳನ್ನು ನೋಡಿದೆವು. ವೈದ್ಯರು ದೇವನಹಳ್ಳಿ ಮಾನಸ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಹೋಗಲು ತಿಳಿಸಿದರು. ನಂತರ ಮಾನಸ ಆಸ್ಪತ್ರೆಗೆ ನನ್ನ ಮಗಳನ್ನು ಚಿಕಿತ್ಸೆಗೆ ದಾಖಲಿಸಿದೆವು. ಅಲ್ಲಿ 10 ದಿನಗಳ ಕಾಲ ನನ್ನ ಮಗಳಿಗೆ ವೈದ್ಯರು ಚಿಕಿತ್ಸೆ ನೀಡಿದರು. ಆಸ್ಪತ್ರೆಯಿಂದ ನನ್ನ ಮಗಳನ್ನು ಬಿಡುಗಡೆಗೊಳಿಸಿ ನಮ್ಮ ಮನೆಗೆ ಕರೆದುಕೊಂಡು ಬಂದೆವು. 3 ನೇ ಆರೋಪಿ ಆಸ್ಪತ್ರೆಗೆ ಬಂದು ನನ್ನ ಮಗಳನ್ನು ನೋಡಿಕೊಂಡು ಹೋಗಿದ್ದರು. ಪುನಃ ಊರಿನಲ್ಲಿ ನ್ಯಾಯ ಪಂಚಾಯಿತಿ ಮಾಡಿದೆವು. ಆಗಲೂ ಸಹ ನನ್ನ ಮಗಳನ್ನು 1 ನೇ ಆರೋಪಿ ಕರೆದುಕೊಂಡು ಹೋಗಲಿಲ್ಲ. ನನಗೆ ಸಾಕಲು ಆಗುವುದಿಲ್ಲ ಬರೆದುಕೊಡುತ್ತೇನೆ ಎಂದು ತಿಳಿಸಿದ. ನಾವು ದೂರು ನೀಡುತ್ತೇವೆ ಎಂದರು ಸಹ ಕೇಳಲಿಲ್ಲ. ನಂತರ ಆರೋಪಿತರ ಮೇಲೆ ದೂರು ದಾಖಲಿಸಿದೆವು.

ದೂರು ನೀಡಿದ ನಂತರ ಪೊಲೀಸರು ಚಿಕ್ಕಕುರುಗೋಡಿನಲ್ಲಿರುವ ನನ್ನ ಅಳಿಯನ ಮನೆಯಲ್ಲಿ ಸಂಜೆ 04.30 ರಿಂದ 05.30 ರವರೆಗೆ ನಿಪಿ 2 ರಂತೆ ಪಂಚನಾಮೆ ಕ್ರಮ ಜರುಗಿಸಿದರು. ಸಾಕ್ಷಿಗೆ ಈ ಹಂತದಲ್ಲಿ ನಿಪಿ 2 ನ್ನು ತೋರಿಸಲಾಗಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಯನ್ನು **ನಿಪಿ 2(ಸಿ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು

ಪೊಲೀಸ್ ಠಾಣೆಯಲ್ಲಿ ನಿಪಿ 2 ಕ್ಕೆ ಸಹಿ ಮಾಡಿದ್ದೆವು ಎಂದು ನುಡಿಯುತ್ತಾರೆ. ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿಯವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಎಪಿಪಿ ರವರಿಂದಃ**

ದಿನಾಂಕ 07.06.2013 ರಂದು ಧರ್ಮಸ್ಥಳದಲ್ಲಿ ನನ್ನ ಮಗಳ ಮದುವೆ ನಡೆದಿತ್ತು ಎಂದರೆ ಸರಿ. ದಿನಾಂಕ 28.10.2019 ರಂದು ನಿಪಿ 2 ಕ್ಕೆ ಚಿಕ್ಕಕುರುಗೋಡಿನಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿ. 3 ಜನ ಆರೋಪಿತರು ಸೇರಿ ನನ್ನ ಮಗಳಿಗೆ ವಿಷ ಪ್ರಾಸನ ಮಾಡಿಸಿರುತ್ತಾರೆ ಎಂದರೆ ಸರಿ.

**ಪಾಟೀಸವಾಲು : ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು